# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.** | : | 678(809) |
| **ಸದಸ್ಯರ ಹೆಸರು.** | : | ಶ್ರೀ. ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು). |
| **ಉತ್ತರಿಸಬೇಕಾದ ದಿನಾಂಕ.** | : | 12.12.2023. |
| **ಉತ್ತರಿಸಬೇಕಾದವರು.** | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| **(ಅ)** | ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಕಳೆದ 10 ವರ್ಷದಿಂದ ಎಷ್ಟು ಸಿ.ಎ ನಿವೇಶನಗಳನ್ನು ಹಂಚಿಕೆ ಮಾಡಿದೆ ; ಎಷ್ಟು ಅರ್ಜಿಗಳು ಬಂದಿವೆ ; | ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಕಳೆದ 10 ವರ್ಷದಿಂದ 230 ಸಿ.ಎ ನಿವೇಶನಗಳನ್ನು ಹಂಚಿಕೆ ಮಾಡಿದೆ ಮತ್ತು 213 ಸಿ.ಎ. ನಿವೇಶನಗಳ ಹಂಚಿಕೆ ಕಾರ್ಯ ಪ್ರಗತಿಯಲ್ಲಿದೆ. ಈ ಸಂಬಂಧ ಒಟ್ಟು 1213 ಅರ್ಜಿಗಳು ಬಂದಿವೆ. |
| **ಆ)** | ಸಿ.ಎ ನಿವೇಶನವನ್ನು ಹಂಚಿಕೆ ಮಾಡಲು ಇರುವ ಮಾನದಂಡವೇನು ; | ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) ನಿಯಮಗಳು 1991ರ ನಿಯಮ 7(1)ರಲ್ಲಿ ಸಿ.ಎ ನಿವೇಶನಗಳನ್ನು ಹಂಚಿಕೆ ಮಾಡಲು ಈ ಕೆಳಕಂಡ ಮಾನದಂಡಗಳನ್ನು ನಿಗಧಿಪಡಿಸಲಾಗಿದೆ.<br>A. ಸಂಸ್ಥೆಯ ಉದ್ದೇಶಗಳು ಮತ್ತುಕಾರ್ಯ ಚಟುವಟಿಕೆಗಳು ಮತ್ತುಅದರ ಸ್ಥಾಪನೆಯಾದಾಗಿನಿಂದ ಅದು ಸಾರ್ವಜನಿಕರ ಹಿತಕ್ಕಾಗಿ ಸಲ್ಲಿಸಿರುವ ಸೇವೆ<br>B. ಸಂಸ್ಥೆಯ ಆರ್ಥಿಕ ಪರಿಸ್ಥಿತಿ<br>C. ಸಂಸ್ಥೆಯು ಈಗ ಇರುವಂತಹ ಸ್ಥಳ ;<br>D. ಸಿ.ಎ ನಿವೇಶನಗಳನ್ನು ಹಂಚಿಕೆ ಮಾಡುವುದರಿಂದ ಸಾಮಾನ್ಯ ಸಾರ್ವಜನಿಕ ಪ್ರದೇಶದ ನಾಗರೀಕರುಗಳಿಗೆ ದೊರಕಬಹುದಾದ ಪ್ರಯೋಜನಗಳು.<br>E. ವಾರ್ಷಿಕ ವರದಿ, ಲೆಕ್ಕ ಪರಿಶೋಧನಾ ವರದಿ ಇತ್ಯಾದಿಗಳಲ್ಲಿ ಶೃತಪಡಿಸಿದಂತೆ ಸಂಸ್ಥೆಯ ಪ್ರಾಮಾಣಿಕತೆ ಮತ್ತು ನಿಸ್ಪೃಹತೆ.<br>F. ಪ್ರಶ್ನಿತ ಸಿ.ಎ.ನಿವೇಶನವನ್ನು ವಿಸ್ತರಿಸುವಲ್ಲಿ ಸಂಸ್ಥೆಗೆ ಅಗತ್ಯವಿರುವ ಸಿ.ಎ.ನಿವೇಶನದ ಅಗತ್ಯ. |

| | | |
|---|---|---|
| ಇ) | ಹಂಚಿಕೆಯಾಗಿರುವ ನಿವೇಶನಗಳಿಂದ ಎಷ್ಟು ಹಣ ಸಂದಾಯವಾಗಿದೆ; ಇನ್ನು ಎಷ್ಟು ಹಣ ಬಾಕಿ ಉಳಿದಿದೆ; ಬಾಕಿ ವಸೂಲಿ ಮಾಡಲು ಪ್ರಾಧಿಕಾರ ತೆಗೆದುಕೊಂಡ ಕ್ರಮವೇನು ? | ಹಂಚಿಕೆಯಾಗಿರುವ ನಿವೇಶನಗಳಿಂದ ರೂ.42,38,36,720/-ಗಳು ಹಣ ಸಂದಾಯವಾಗಿದೆ. ಇನ್ನು ರೂ.56,20,06,687/-ಗಳು ಹಣ ಬಾಕಿ ಉಳಿದಿರುತ್ತದೆ. ಸಂಸ್ಥೆಗಳಿಗೆ ಸಮ ವಾರ್ಷಿಕ ಗುತ್ತಿಗೆ ಕಂತುಗಳನ್ನು ಆಯ್ಕೆ ಮಾಡಲು ಅವಕಾಶವಿರುವುದರಿಂದ ಬಾಕಿ ಇರುತ್ತದೆ. ಬಾಕಿಯನ್ನು ಕಂತುಗಳು ವಿಳಂಬವಾದಲ್ಲಿ ಬಡ್ಡಿ ಸಹಿತ ವಸೂಲಿ ಮಾಡಲು ಪ್ರಾಧಿಕಾರದಿಂದ ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ನಅಇ 371 ಮೈಅಪ್ರಾ 2023

11/12/2023

(ಸುರೇಶ್ ಬಿ.ಎಸ್)

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು